ಮರುಕ್ಷಣವೇ ಬಾಗಿಲು ತೆಗೆದ ಸದ್ದಾಗಿ ಒಂದು ಹೆಜ್ಜೆ ಹಿಂದೆ ಸರಿದ.

ಕಂದೀಲು ಸ್ವಲ್ಪ ಮೇಲೆತ್ತಿ ಶಿವರಾವು ಮುಖವನ್ನು ನೋಡಲು ಪ್ರಯತ್ನಿಸುತ್ತಿರುವಂತೆ ಕಣ್ಣು ಕಿರಿದುಗೊಳಿಸಿ ನೋಡುತ್ತ ಅಂದಳಾಕೆ.

"ಯಾರೂ? ಯಾರು ಬೇಕು?"

ಶಿವರಾವು ಮಾತಾಡಲಿಲ್ಲ. ಕೊರಳನ್ನು ಯಾರೋ ಒತ್ತಿ ಹಿಡಿದಂತೆನಿಸಿತು. ಮೈಯೊಳಗಿನ ನೀರೆಲ್ಲ ಕಣ್ಣೀರಾಗಿ ಹೊರಬರಲು ಸಿದ್ಧವಾದಂತಿತ್ತು ಆತನ ನೋಟ.

ಆ ಕಂದೀಲ ಬೆಳಕಲ್ಲಿ ಅಕ್ಕನನ್ನು ಗುರುತಿಸಿದ.

"ಅಕ್ಕಾ" ಅಂದ ಅಂತೂ ಕಡೆಗೆ ಶಿವರಾವು.

"ಯಾರೂ?" ಅಂದಳು ಶಾಂತಿ ಕಂದೀಲನ್ನು ಶಿವರಾವು ಮುಖಕ್ಕೆ ತಗುಲಿಸಿದಂತೆ ಹಿಡಿದು. ಆಕೆ ಆತನನ್ನು ಗುರುತಿಸಲು ಪ್ರಯತ್ನಪಡ್ತಿದ್ದಳು.

"ನಾನಕ್ಕಾ..."

"ಶಿವಾ?" ಅಂದಳು ಶಾಂತಿ ಆಶ್ಚರ್ಯದಿಂದ.

ಹೌದೆಂಬಂತೆ ತಲೆದೂಗಿದ ಶಿವರಾವು.

"ಶಿವಾ" ಅಂದಳು ಶಾಂತಿ ಮತ್ತೆ.

ಸಣ್ಣ ಅಳು. ಹೊಟ್ಟೆಯೊಳಗಿಂದ ಕಟ್ಟೆಯೊಡೆದು ಬರುತ್ತಿರುವ ಅಳುವನ್ನು ತಡೆಯಲೆಂಬಂತೆ ಬಾಯಿಗೆ ಸೆರಗು ತುರುಕಿಕೊಂಡಳು.

"ಒಳಗ್ಬಾಡಿ" ಅಂದ ಶಿವರಾವು ಹೊಸ್ತಿಲೊಳಗೆ ಕಾಲಿಡುತ್ತ.

ಅಳುತ್ತಲೇ ದಾರಿ ತೋರಿಸುತ್ತ ಒಳಕರೆದುಕೊಂಡು ಹೋದಳು ಶಾಂತಿ. ಮಂಚದ ಮೇಲೆ ಕೂತ ಶಿವರಾವು. ಕಂದೀಲನ್ನು ಕೊಕ್ಕೆಗೆ ಸಿಗಿಸಿ ಶಾಂತಿ ಕೆಳಗೆ ಕೂತಳು. ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಅಳುತ್ತಿರುವ ಅಕ್ಕನನ್ನು ತಡೆಯುವ ಪ್ರಯತ್ನವನ್ನೇನೂ ಮಾಡಲಾಗದೆ ಹೋದ ಶಿವರಾವು. ಸುತ್ತ ನೋಡಿದ. ಒಂದು ಮೂಲೆಯಲ್ಲಿ ಇಬ್ಬರು ಹೆಣ್ಣುಮಕ್ಕಳು ಮಲಗಿದ್ದರು. ಮಂಚದ ಮೇಲೆ ಇನ್ನೊಬ್ಬಾಕೆ ಮಲಗಿದ್ದಳು. ಅವರು ಮೂವರೂ ತನ್ನ ತಂಗಿಯರೇ ಆಗಿರಬಹುದು ಅಂದುಕೊಂಡ. ತಮ್ಮಂದಿರೆಲ್ಲಿ? ಅಮ್ಮ ಎಲ್ಲಿ? ಅಪ್ಪ ಎಲ್ಲಿ? ಅಂತ ಕೇಳಬೇಕೆಂದುಕೊಂಡ.

"ಅಮ್ಮ ಎಲ್ಲ್ಯಕ್ಕ?" ಅಂದ ಶಿವರಾವು.

ಆ ಮಾತಿಗೆ ಅಳು ನಿಲ್ಲಿಸಿ ನಿರ್ವಿಕಾರವಾಗಿ ನೆಲ ನೋಡುತ್ತ ಕುಳಿತಿದ್ದ ಅಕ್ಕನಲ್ಲಿ ಚಲನೆ ಮೂಡಿತು. ದುಃಖ ಒತ್ತರಿಸಿಕೊಂಡು ಬಂತು ಆಕೆಗೆ. ಈ ಸಲ ಅಮ್ಮನಿಲ್ಲದ ಕೊರತೆ ತೀರಿ ಹೋಗುವಷ್ಟು ಅಳಲು ಶುರು ಮಾಡಿದಳು. ಅಷ್ಟು ಹೊತ್ತಿಗೆ ಮಲಗಿದ್ದ ಮೂವರೂ ಎದ್ದು ಕೂತಿದ್ದರು.

ಅವರಿಗೇನೂ ಅರ್ಥವಾಗಲಿಲ್ಲ. ಆಗುತ್ತಲೂ ಇಲ್ಲ. ನಿದ್ದೆ ಮಬ್ಬು ಇಳಿಯದವರಂತೆ ಹುಚ್ಚರಂತೆ ನೋಡ್ತಾ ಕೂತಿದ್ದರು.

"ಅಮ್ಮ ಎಲ್ಲಿ ಲಕ್ಷ್ಮೀ?" ಆ ಮೂವರಲ್ಲಿ ಯಾರು ಲಕ್ಷ್ಮಿ ಎಂದು ತಿಳಿಯದಿದ್ದರೂ ಕೇಳಿದ.

"ಯಾರ ಅಮ್ಮ? ನಮ್ಮಮ್ಮಾ? ಸತ್ತು ಹೋದಳು. ಅಪ್ಪ ಸತ್ತ ಮೂರು ತಿಂಗಳಿಗೇ ಹೋಗಿಬಿಟ್ಟಳು" ಅಕ್ಕ ಯಾಕೆ ಅಳ್ತಿದ್ದಾಳೆ ಅಂತ ಮಿಕ್ಕವರಿಗೀಗ ತಿಳಿಯಿತು. ಎಲ್ಲರ ಕಣ್ಣಲ್ಲೂ ನೀರು ತುಂಬಿದವು.

"ತಮ್ಮ?"

"ಯಾರು? ವಾಸಾ? ಅವನ ಸಲುವಾಗಿ ಆರು ತಿಂಗಳು ಹುಡುಕಿ ಸುಮ್ಮನಾದ್ವಿ" ಅಂದಳು ಲಕ್ಷ್ಮಿ.

"ರಾಘವ ಸಿನಿಮಾ ಟಾಕೀಸಲ್ಲಿ ಕೆಲಸ ಮಾಡ್ತಾನ. ರಾತ್ರಿ ಮೂರು ಗಂಟೆಗೆ ಬರ್ತಾನ" ಅಂದಳು ಲಕ್ಷ್ಮಿ ಮತ್ತೆ.